# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ದೇವಮ್ಮ, ಅಧ್ಯಕ್ಷರು, ಸೊಂಡೇಕೊಳ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 48(4) & 48(5) ರಡಿ ಕ್ರಮ ಜರುಗಿಸುವ ಕುರಿತು.

**ಓದಲಾಗಿದೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ ಚಿತ್ರದುರ್ಗ ಜಿಲ್ಲೆ ಇವರ ಪತ್ರ ಸಂಖ್ಯೆ:ಜಿಪಂ:ಆ(12):ಗ್ರಾ.ಪಂ/ಸಿಆರ್/145/2018-19 ದಿನಾಂಕ:10.09.2018.

**ಪ್ರಸ್ತಾವನೆ:**

ಮೇಲೆ ಓದಲಾದ ಪ್ರಸ್ತಾವನೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿತ್ರದುರ್ಗ ಇವರು ಶ್ರೀಮತಿ ದೇವಮ್ಮ, ಅಧ್ಯಕ್ಷರು, ಸೊಂಡೇಕೊಳ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ಅವಧಿಯಲ್ಲಿ ಹಲವಾರು ರೀತಿಯ ಹಣಕಾಸಿನ ಅವ್ಯವಹಾರ ನಡೆಸಿರುವ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಚಿತ್ರದುರ್ಗ ರವರ ತನಿಖಾ ವರದಿಯಲ್ಲಿ ಅವ್ಯವಹಾರವಾಗಿರುವುದು ಸಾಬೀತಾಗಿರುವ ಬಗ್ಗೆ ಉಪವಿಭಾಗಾಧಿಕಾರಿ, ಚಿತ್ರದುರ್ಗ ಇವರಿಗೆ ವರದಿಯನ್ನು ಮಾಡಿರುತ್ತಾರೆ ಹಾಗೂ ಸದರಿ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ಸಹ ಸದರಿ ಅಧ್ಯಕ್ಷರನ್ನು ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವ ಸ್ಥಾನವನ್ನು ವಜಾಗೊಳಿಸಲು ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆಂದು ತಿಳಿಸುತ್ತಾ, ಆಪಾದಿತ ಅಧ್ಯಕ್ಷರ ಅವ್ಯವಹಾರದ ವರದಿ ಹಾಗೂ ದಾಖಲೆಗಳೊಂದಿಗೆ ಸಲ್ಲಿಸುತ್ತಾ, ಸದರಿ ಅಧ್ಯಕ್ಷರನ್ನು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43(ಎ) ಮತ್ತು 48(4) ರನ್ವಯ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವದಿಂದ ವಜಾ ಮಾಡುವಂತೆ ಕೋರಿರುತ್ತಾರೆ.

ಸದರಿ ತನಿಖಾ ವರದಿಯ ಅಂಶಗಳು ಈ ಕೆಳಕಂಡಂತಿರುತ್ತದೆ.

- 14ನೇ ಹಣಕಾಸಿನ ಅನುದಾನದಲ್ಲಿ ರೂ.159898/-ಗಳು ಹಣ ದುರುಪಯೋಗವಾಗಿದೆ.
- ಸೊಂಡೇಕೊಳ ಗ್ರಾಮ ಪಂಚಾಯಿತಿ ಅಧ್ಯಕ್ಷರ ಸೀಲಿಗೆ ಬದಲಾಗಿ ಚಿಕ್ಕಗೊಂಡನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಸೀಲನ್ನು ಜೆರಾಕ್ಸ್ ಪ್ರತಿಗಳ ಚೆಕ್ಕುಗಳಲ್ಲಿ ಹಾಕಲಾಗಿದೆ.
- ದಾಸ್ತಾನು ವಹಿಯಲ್ಲಿ ಸಾಮಾಗ್ರಿಗಳನ್ನು ಯಥಾಸ್ಥಿತಿಯಲಿ ಪಡೆದಿರುವುದಿಲ್ಲ ಹಾಗೂ ದಾಸ್ತಾನುವಹಿ ಸರಿಯಾಗಿ ನಿರ್ವಹಿಸಿರುವುದಿಲ್ಲ.
- ಸಭಾ ನಡವಳಿಯಲ್ಲಿ ಖಾಲಿ ಹಾಳೆಗಳನ್ನು ಬಿಡಲಾಗಿದೆ. ಕೆಲವು ನಡವಳಿಗೆ ಅಧ್ಯಕ್ಷರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಸಹಿ ಮಾಡಿರುವುದಿಲ್ಲ. ದಿನಾಂಕ: 30.10.2017 ಮತ್ತು 28.11.2017ರ ನಡವಳಿ ಬರೆದಿರುವುದಿಲ್ಲ
- ಗ್ರಾಮ ಸಭೆ ವಹಿಯಲ್ಲಿ ಬಿಳಿಬಣ್ಣ ಹಚ್ಚಿ ಪುನಃ ಬರೆಯಲಾಗಿದೆ.

- ವರ್ಗ-1ರಲ್ಲಿ ಬಿಲ್ಲುಗಳನ್ನು ತನಿಖೆಗೆ ಒದಗಿಸದೆ ರೂ.483109/-ಗಳು ದುರುಪಯೋಗವಾಗಿದೆ.
- ರೂ.5.00 ಲಕ್ಷ ಚೆಕ್ ಡ್ಯಾಂ ಬಿಲ್ಲು ತನಿಖೆಗೆ ಒದಗಿಸದೆ ಹಣ ದುರುಪಯೋಗವಾಗಿದೆ.
- ನೀರಿನ ಟ್ಯಾಂಕರ್ ಬಿಲ್ಲುಗಳ ತನಿಖೆಗೆ ಒದಗಿಸಿರುವುದಿಲ್ಲ.

ಸದರಿ ಪ್ರಕರಣವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 48(ಎ) ಮತ್ತು 48(4)ರಡಿಯಲ್ಲಿ ದಾಖಲಿಸಿಕೊಳ್ಳಲಾಹಿತು ಮತ್ತು ಆರೋಪಿತ ಅಧ್ಯಕ್ಷರಿಗೆ ಸದರಿ ಪ್ರಕರಣದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಜಿಲ್ಲೆ ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಲಗತ್ತಿಸಿ, ದಿನಾಂಕ:29.10.2018ರಂದು ಕಾರಣ ಕೇಳುವ ನೋಟೀಸ್ಸನ್ನು ಜಾರಿಗೊಳಿಸಿ, 15ದಿನದೊಳಾಗಾಗಿ ಸಮಜಾಯಿಷಿಯನ್ನು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

ಅಧ್ಯಕ್ಷರು, ಸೊಂಡೆಕೊಳ ಗ್ರಾ.ಪಂ. ಚಿತ್ರದುರ್ಗ ಇವರು ದಿನಾಂಕ:03.12.2018ರ ತಮ್ಮ ಸಮಾಜಾಯಿಷಿಯಲ್ಲಿ ನನ್ನ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿತ್ರದುರ್ಗ ರವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ ರವರಿಗೆ ಸಲ್ಲಿಸಿರುವ ವರದಿಯಲ್ಲಿ ಮಾಡಿರುವ ಆರೋಪವು ಸತ್ಯಕ್ಕೆ ದೂರವಾದ ಸಂಗತಿ ಯಾಗಿರುತ್ತದೆ. ಒಂದು ವೇಳೆ ನನ್ನ ಮೇಲೆ ಅನುಮಾನವಿದ್ದಲ್ಲಿ ಗ್ರಾಮ ಪಂಚಾಯಿತಿ ವಿಶೇಷ ಆಡಿಟ್‌ನ್ನು ಮಾಡಿಸಲು ತಾವು ಆದೇಶಿಸಬಹುದಾಗಿರುತ್ತದೆ.

ಸದರಿ ಪ್ರಕರಣದ ವಿಚಾರಣೆಯನ್ನು ಸರ್ಕಾರದಲ್ಲಿ ಅರೆನ್ಯಾಯಿಕ ನ್ಯಾಯಾಲಯದಲ್ಲಿ ನಡೆಸಲು ತೀರ್ಮಾನಿಸಿ, ಅದರಂತೆ ವಿಚಾರಣಾ ಹಾಜರಾತಿ ತಿಳುವಳಿಕೆ ಪತ್ರ ದಿನಾಂಕ:06.07.2019, 04.09.2019, 15.10.2019 ಮತ್ತು 06.11.2019ರ ಗಳಂದು ವಿಚಾರಣೆಗೆ ತೆಗೆದುಕೊಂಡು, ವಿಚಾರಣೆ ನಡೆಸಲಾಗಿರುತ್ತದೆ.

ದಿನಾಂಕ:04.09.2019ರಂದು ನಡೆದ ವಿಚಾರಣೆ ವೇಳೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅವ್ಯವಹಾರದ ಬಗ್ಗೆ ಮರು ತನಿಖೆ ನಡೆಸಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಇವರು ಸಲ್ಲಿಸಿದ್ದ, ವರದಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ ಇವರ ಅಭಿಪ್ರಯಾವನ್ನು ಪಡೆದು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

ಅದರಂತೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಚಿತ್ರದುರ್ಗ ರವರು ದಿ:14.10.2019ರ ಪತ್ರದಲ್ಲಿ ಶ್ರೀಮತಿ ದೇವಮ್ಮ ಅಧ್ಯಕ್ಷರು, ಸೊಂಡೆಕೊಳ ಗ್ರಾ.ಪಂ, ಚಿತ್ರದುರ್ಗ ತಾ॥ ಇವರ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯ ಒಟ್ಟು ಎಂಟು ಸಮಾನ್ಯ ಸಭೆ ನಡವಳಿಗಳಲ್ಲಿ ಸಹಿ ಮಾಡಿದಿರುವುದಿಲ್ಲವೆಂದು ಹಾಗೂ ನಡವಳಿ ಪುಸ್ತಕದಲ್ಲಿ ಖಾಲಿ ಹಾಳೆ ಬಿಟ್ಟಿರುತ್ತಾರೆ ಮತ್ತು ಸಮಾನ್ಯ ಸಭೆಗಳು ನಡೆದ ಹಾಗೆ ಸಭೆಯ ನಡವಳಿಗಳನ್ನು ನಡವಳಿ ವಹಿಯಲ್ಲಿ ದಾಖಲಿಸಿ, ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಹಿ ಮಾಡಬೇಕಾಗಿರುತ್ತದೆ. ನಡವಳಿಗಳನ್ನು ಸರಿಯಾಗಿ ದಾಖಲಿಸದಿರುವುದು, ಅಧ್ಯಕ್ಷರ ಸಹಿ ಹಾಕಿಸದಿರುವುದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೇ ಸ್ವತಃ ಸಹಿ ಮಾಡದಿರುವುದು ವಹಿಯನ್ನು ಕ್ರಮಬದ್ಧವಾಗಿ ನಿರ್ವಹಿಸದಿರುವುದು ಇವುಗಳು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರ ಕರ್ತವ್ಯ ನಿರ್ಲಕ್ಷ ಮನೋಭಾವ ತೋರಿಸುತ್ತದೆ ಹಾಗೂ ಕರ್ತವ್ಯ ಲೋಪ ಎಸಗಿರುತ್ತಾರೆ ಎಂದು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಪ್ರಕರಣದ ವಿಚಾರಣಾ ಸಮಯದಲ್ಲಿ ಆಪಾದಿತ ಅಧ್ಯಕ್ಷರ ಹೇಳಿಕೆ ಮತ್ತು ಜಿಲ್ಲಾ ಪಂಚಾಯಿತಿಗಳ ವರದಿಗಳನ್ನು ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ಪರಿಶೀಲಿಸಲಾಗಿ, ಆಪಾದಿತ ಅಧ್ಯಕ್ಷರು ಸೊಂಡೆಕೊಳ ಗ್ರಾಮ ಪಂಚಾಯಿತಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮ/ಯೋಜನೆಗಳ ಅನುದಾನವನ್ನು ದುರ್ಬಳಕೆ ಮಾಡಿರುವುದು ಹಾಗೂ ಅವ್ಯವಹಾರ ನಡೆದಿರುವುದು ಸಬೀತಾಗಿರುವುದರಿಂದ ಅಧ್ಯಕ್ಷರ ಕರ್ತವ್ಯ ನಿರ್ವಹಣೆ ಹಾಗೂ ದುರ್ನಡತೆ ಎಸಗಿರುವ ಹಿನ್ನೆಲೆಯಲ್ಲಿ ತಪ್ಪಿತಸ್ಥರಾಗಿರುವುದಕ್ಕಾಗಿ ಶ್ರೀಮತಿ ದೇವಮ್ಮ, ಅಧ್ಯಕ್ಷರು, ಸೊಂಡೆಕೊಳ ಗ್ರಾಮ ಪಂಚಾಯಿತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993ರ ಪ್ರಕರಣ 48(4) ಮತ್ತು 48(5)ರಡಿ ಸದರಿಯವರನ್ನು ಗ್ರಾಮ ಪಂಚಾಯತಿಯ ಅಧ್ಯಕ್ಷ ಸ್ಥಾನ ಮತ್ತು ಸದಸ್ಯ ಸ್ಥಾನದಿಂದ ತೆಗೆದುಹಾಕಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 954 ಗ್ರಾಪಂಅ 2018 ಬೆಂಗಳೂರು, ದಿನಾಂಕ:06.01.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ದೇವಮ್ಮ, ಅಧ್ಯಕ್ಷರು, ಸೊಂಡೆಕೊಳ ಗ್ರಾಮ ಪಂಚಾಯಿತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ಇವರು ಅಭಿವೃದ್ಧಿ ಕಾರ್ಯಕ್ರಮ/ಯೋಜನೆಗಳ ಅನುದಾನ ದುರ್ಬಳಕೆಯ ಅವ್ಯವಹಾರ ನಡೆದಿರುವುದು ಸಬೀತಾಗಿರುವುದರಿಂದ ಹಾಗೂ ಒಟ್ಟು ಎಂಟು ಸಮಾನ್ಯ ಸಭೆ ನಡವಳಿಗಳಲ್ಲಿ ಸಹಿ ಮಾಡದೇ ಇರುವುದು ಹಾಗೂ ನಡವಳಿ ಪುಸ್ತಕದಲ್ಲಿ ಖಾಲಿ ಹಾಳೆ ಬಿಟ್ಟಿರುವುದು ಮತ್ತು ಸಮಾನ್ಯ ಸಭೆಗಳು ನಡೆದ ಹಾಗೆ ಸಭೆಯ ನಡವಳಿಗಳನ್ನು ನಡವಳಿ ವಹಿಯಲ್ಲಿ ದಾಖಲಿಸಿರುವುದು ಕರ್ತವ್ಯ ನಿರ್ಲಕ್ಷ್ಯತೆ ಮತ್ತು ದುರ್ನಡತೆ ಹಾಗೂ ಅಧಿಕಾರ ದುರುಪಯೋಗ ಮಾಡಿರುವ ಆಪಾದನೆ ಸಾಬೀತಾಗಿರುತ್ತದೆ. ಆದುದರಿಂದ ಶ್ರೀಮತಿ ದೇವಮ್ಮ, ಅಧ್ಯಕ್ಷರು, ಸೊಂಡೆಕೊಳ ಗ್ರಾಮ ಪಂಚಾಯಿತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ರವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣದ 48(4) ಮತ್ತು 48(5)ರನ್ವಯ ಸೊಂಡೆಕೊಳ ಗ್ರಾಮ ಪಂಚಾಯತಿಯ ಅಧ್ಯಕ್ಷ ಸ್ಥಾನದಿಂದ ಹಾಗೂ ಸದಸ್ಯತ್ವ ಸ್ಥಾನದಿಂದ ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

06/01/202
(ರಮೇಶ್ ಡಿ.ಪಿ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

1) ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಬೆಂಗಳೂರು, 2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹಚ್. ರಸ್ತೆ, ಬೆಂಗಳೂರು.
2) ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿತ್ರದುರ್ಗ ಜಿಲ್ಲೆ.
4) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಚಿತ್ರದುರ್ಗ ಮತ್ತು ಜಿಲ್ಲೆ.

(6)

5) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸೊಂಡೆಕೊಳ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು, ಮತ್ತು ಜಿಲ್ಲೆ.
6) ಶ್ರೀಮತಿ ದೇವಮ್ಮ, ಹಿಂದಿನ ಅಧ್ಯಕ್ಷರು, ಸೊಂಡೆಕೊಳ ಗ್ರಾಮ ಪಂಚಾಯಿತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ. **(ಇವರಿಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಚಿತ್ರದುರ್ಗ & ಜಿಲ್ಲೆ ಇವರ ಮುಖಾಂತರ)**
7)

**ಪ್ರತಿಯನ್ನು ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.
4) ಗಣಕ ಕೋಶ.